ಈ) ಸದರಿ ವಸತಿ ನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ 927 ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ್ದರು.

ಉ) ಇಲ್ಲ. ಈ ವಿದ್ಯಾರ್ಥಿನಿಲಯಗಳಿಗೆ ನಿಗದಿಪಡಿಸಿರುವ ಮಂಜೂರಾತಿ ಸ್ಥಾನಗಳಿಗೆ ಮಾತ್ರ ಪ್ರವೇಶಾವಕಾಶವನ್ನು ನೀಡಲಾಗುತ್ತಿದೆ.

ಊ) ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾವನೆಯನ್ನು ಅನುದಾನದ ಕೊರತೆಯಿಂದಾಗಿ ಸದ್ಯಕ್ಕೆ ಮುಂದೂಡಲಾಗಿದೆ.

2645 (2761) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ):– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಗೆ ಬರುವ ಪಶುವೈದ್ಯಕೀಯ ಇಲಾಖೆಯ ವಿವಿಧ ವರ್ಗದ ಚಿಕಿತ್ಸಾ ಕೇಂದ್ರಗಳ ವಿವರಗಳೇನು;

ಆ) ಅವುಗಳಿಗೆ ನಿಗದಿತ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆಯೇ;

ಇ) ಇಲ್ಲವಾದಲ್ಲಿ, ಈ ಕುರಿತಾದ ಸರ್ಕಾರದ ಕ್ರಮಗಳೇನು;

ಈ) ಪಶುಸಂಗೋಪನಾ ಕೇಂದ್ರದಲ್ಲಿ ವೈದ್ಯರು ಮತ್ತು ಔಷಧಿಗಳ ಪೂರೈಕೆಯ ವಿವರಗಳೇನು?

ಶ್ರೀ ಮೆರಾಜುದ್ದೀನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 13 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಪಶು ಆಸ್ಪತ್ರೆ	1
ಪಶು ಚಿಕಿತ್ಸಾಲಯ	5
ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	7
ಒಟ್ಟು	13

ಆ) ಸಿಬ್ಬಂದಿವಾರು ವಿವರ ಅನುಬಂಧದಲ್ಲಿ ಒದಗಿಸಲಾಗಿದೆ.

- ಆರೋಗ್ಯ ರಕ್ಷಣೆ, ರೋಗ ನಿಯಂತ್ರಣ, ಕೃತಕ ಗರ್ಭಧಾರಣಾ ವಿಸ್ತೀರ್ಣ ಸೌಲಭ್ಯ, ಔಷಧಗಳ ಹಾಗೂ ಉಪಕರಣಗಳ ಸರಬರಾಜು;
- ಕಾಲು ಬಾಯಿ ಜ್ವರ ಮತ್ತು ಹುಚ್ಚು ನಾಯಿ ತಡೆಗಟ್ಟುವ ಲಸಿಕೆ ಹೊರತುಪಡಿಸಿ ಎಲ್ಲಾ ಲಸಿಕೆಗಳು ಉಚಿತ ಪೂರೈಕೆ;

- ಜಾನುವಾರು ರೋಗ ತಪಾಸಣಾ ಪ್ರಯೋಗಾಲಯ;
- ಜಾನುವಾರು ತಳಿ ಸಂವರ್ಧನಾ ಸವಲತ್ತುಗಳು;
- ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಮತ್ತು ಪಶು ಚಿಕಿತ್ಸಾಲಯಗಳಿಗೆ ನಬಾರ್ಡ್ ಮತ್ತು ಆರ್.ಐ.ಡಿ.ಎಫ್ ಯೋಜನೆಯಲ್ಲಿ ಕಟ್ಟಡಗಳನ್ನು ನಿರ್ಮಿಸಲು ಪರಿಶೀಲಿಸಲಾಗುತ್ತದೆ.

ಇ) ರಾಜ್ಯದಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಪಶುವೈದ್ಯಾಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಕ್ರಿಯೇ ಪ್ರಾರಂಭಗೊಂಡಿವೆ. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ನಿಯಮದಡಿಯಲ್ಲಿ ನೇಮಕ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಹಾಗೂ 192 ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಮೇಲ್ವಿಚಾರಕರು ಹಾಗೂ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು 50:50ರ ಅನುಪಾತದಲ್ಲಿ ಪಶುವೈದ್ಯಕೀಯ ಸಹಾಯಕ ಮುಂಬಡ್ತಿ ಹಾಗೂ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಡಿ ಗ್ರೂಪ್ ನೌಕರರಿಗೆ ಅಗತ್ಯ ತರಬೇತಿ ನೀಡಿ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುವುದು. ವಾಹನ ಚಾಲಕರ ಖಾಲಿ ಹುದ್ದೆಗಳನ್ನು ಭಾರಿ ವಾಹನ ಚಾಲನೆ ಪರವಾನಗಿ ಪಡೆದ ಡಿ ದರ್ಜೆ ನೌಕರರಿಗೆ ಮುಂಬಡ್ತಿ ನೀಡಲು ಪರಿಶೀಲಿಸಲಾಗುತ್ತಿದೆ. ಹಾಗೂ ಡಿ ದರ್ಜೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇರೆಗೆ ಹಾಗೂ ಇತರೆ ಇಲಾಖೆಗಳಿಂದ ಮರು ವಿನ್ಯಾಸ ಮೂಲಕ ಭರ್ತಿ ಮಾಡಲಾಗುತ್ತಿದೆ.

ಈ) ಮಂಜೂರಾದ ಪಶುವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ – 6. ಭರ್ತಿಯಾದ ಹುದ್ದೆಗಳ ಸಂಖ್ಯೆ – 2. ಬಾಗಲಕೋಟೆ ವಿಧಾನ ಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶುವೈದ್ಯಕೀಯ ಸಂಸ್ಥೆಗಳಿಗೆ ರಾಜ್ಯ ವಲಯದಿಂದ ರೂ.2.66 ಲಕ್ಷಗಳು ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ರೂ.1.05 ಲಕ್ಷ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಅನುಬಂಧ – 1

ಪ್ರಶ್ನೆ ಸಂಖ್ಯೆ : 2761

ಕ್ರ ಸಂ.	ಸಂಸ್ಥೆಯ ಹೆಸರು	ಸಹಾಯಕ ನಿರ್ದೇಶಕರು			ಪಶುವೈದ್ಯಾಧಿಕಾರಿ			ಪಶುವೈದ್ಯಕೀಯ ಮೇಲ್ವಿಚಾರಕರು			ಹಿರಿಯ ಪಶುವೈದ್ಯಕೀಯ ಪರೀಕ್ಷಕರು			ಪಶುವೈದ್ಯಕೀಯ ಪರೀಕ್ಷಕರು			ಪಶುವೈದ್ಯಕೀಯ ಸಹಾಯಕರು			ಡಿ ದರ್ಜೆ ನೌಕರರು		
		ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಪಶು ಆಸ್ಪತ್ರೆ ಬಾಗಲಕೋಟೆ	1	1	0	1	1	0	1	1	0	0	0	0	2	2	0	1	1	0	2	1	1
2	ಪಶು ಚಿಕಿತ್ಸಾಲಯ ಆಲಮೂರು	0	0	0	1	0	1	0	0	0	0	0	0	1	1	0	1	1	0	2	2	0
3	ಪಶು ಚಿಕಿತ್ಸಾಲಯ ಕಲಾದಗಿ	0	0	0	1	0	1	0	0	0	1	1	0	0	0	0	0	0	0	2	2	0
4	ಪಶು ಚಿಕಿತ್ಸಾಲಯ ಛಗವತಿ	0	0	0	1	0	1	0	0	0	0	0	0	1	1	0	1	1	0	2	1	1
5	ಪಶು ಚಿಕಿತ್ಸಾಲಯ ಹುಳಸೇರಿ	0	0	0	1	1	0	0	0	0	1	1	0	0	0	0	1	1	0	2	1	1
6	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಗದ್ದನಕೇರಿ	0	0	0	0	0	0	0	0	0	1	1	0	0	0	0	1	1	0	1	1	0
7	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಕಿಮ್ಮಾಪೂರ	0	0	0	0	0	0	0	0	0	1	1	0	0	0	0	1	0	1	1	1	0
8	ಪಶು ಚಿಕಿತ್ಸಾ ನಾಯನೇಗಲಿ	0	0	0	1	0	1	0	0	0	1	0	1	0	0	0	1	1	0	2	1	1

9	ಶ್ರೀಮತಿ ಪದ್ಮ ಚಿತ್ತರ್ಗಿ ತೆಂಗಿನ ಉತ್ಪಾದಕರಾಗಿ	0	0	0	0	0	0	0	0	1	1	0	0	0	0	0	1	1	0	1	1	19	15	4	0
10	ಶ್ರೀಮತಿ ಪದ್ಮ ಚಿತ್ತರ್ಗಿ ತೆಂಗಿನ ಬೆಳೆಗಾರ	0	0	0	0	0	0	0	0	1	1	0	0	0	0	0	1	1	0	1	1	19	15	4	0
11	ಶ್ರೀಮತಿ ಪದ್ಮ ಚಿತ್ತರ್ಗಿ ತೆಂಗಿನ ಸಂಶೋಧಾಯಿ	0	0	0	0	0	0	0	0	1	1	0	0	0	0	0	1	1	0	1	1	19	15	4	0
12	ಶ್ರೀಮತಿ ಪದ್ಮ ಚಿತ್ತರ್ಗಿ ತೆಂಗಿನ ಮಂಡಿಯಾಜ್ಞೆಗೆ	0	0	0	0	0	0	0	0	1	1	0	0	0	0	0	1	1	0	1	1	19	15	4	0
13	ಶ್ರೀಮತಿ ಪದ್ಮ ಚಿತ್ತರ್ಗಿ ತೆಂಗಿನ ಬೆಳೆಗಾರರಾಗಿ	0	0	0	0	0	0	0	0	1	1	0	0	0	0	0	1	1	0	1	1	19	15	4	0
	ಒಟ್ಟು	1	1	0	6	2	4	1	1	0	10	9	1	4	4	0	12	11	1	19	15	4			